ಕರ್ನಾಟಕ ಸರ್ಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಸಂ.ಕಂ/ಪಹಣಿ/ವಿವಾದ/92/2014-15

ದಿನಾಂಕ: 26-05-2016

ಉಪಸ್ಥಿತರು : ಹೆಚ್.ವಿಶ್ವನಾಥ, ತಹಶೀಲ್ದಾರರು,

| ವಾದಿಗಳು | ಪ್ರತಿವಾದಿಗಳು / ಎದುರುದಾರರು |
|---|---|
| ಶ್ರೀ.ಶೇಖರ ನಾಯ್ಕ ತಂದೆ ಲೇಟ್ ರೇಖ್ಯಾನಾಯ್ಕ ಕಗ್ಗಲಗಟ್ಟಿ ತಾಂಡ (ಶ್ರೀ.ಎಸ್.ಬಸವರಾಜ ರವರು ವಕೀಲರು ಹಡಗಲಿ ) | ಶ್ರೀಮತಿ.ಉಮಾ ಗಂಡ ಲೇಟ್ ಕುಮಾರನಾಯ್ಕ ಕಗ್ಗಲಗಟ್ಟಿ ತಾಂಡ (ಶ್ರೀ.ಜಿ.ಮಂಜುನಾಥ ರವರು ವಕೀಲಲರು ಹಡಗಲಿ |

**ದಾವಾ ಜಮೀನಿನ ವಿವರ**

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| ತಮಲಾಪುರ | 99/ಬಿ | 1-50 |

**ಪ್ರಸ್ತಾವನೆ :**

ಮೇಲಿನ ದಾವಾ ಜಮೀನನ್ನು ವಾದಿಯು ಶ್ರೀಮತಿ.ಚಂದ್ರಕಲಾ ಗಂಡ ಕಮಲಾನಾಯ್ಕ ಕೆ.ಕೆ.ತಾಂಡ ರವರಿಂದ ಕ್ರಯ ನೊಂದಣಿ ಕ್ರಯ ಪತ್ರ ದಸ್ತಾವೇಜು ಸಂಖ್ಯೆ247-2014-15 ದಿನಾಂಕ 06-12-2014 ರ ಪ್ರಕಾರ ಖರೀದಿ ಮಾಡಿದ್ದು. ಅದರಂತೆ ನೊಂದಣಿ ಜೆ ನಮೂನೆ ಪ್ರಕಾರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 128ರ ಅನ್ವಯ ಹಕ್ಕು ಬದಲಾವಣೆ ಪ್ರಕ್ರಿಯೆಗೆ ಒಳಪಡಿಸಲಾಗಿ, ನಿಗಧಿತ ಅವಧಿಯೊಳಗೆ ಗ್ರಾಮದಲ್ಲಿ ಗ್ರಾಮ ಲೆಕ್ಕಾಧಿಕಾರಿಗಳು ತಮಲಾಪುರ ರವರು ನಮೂನೆ-21ನ್ನು ಜಾರಿಮಾಡಿದಾಗ, ದಿನಾಂಕ 12-01-2015 ಮತ್ತು 10-03-2015 ರಂದು ಪ್ರತಿವಾದಿಗಳಿಂದ ಲಿಖಿತ ಆಕ್ಷೇಪಣೆ ಸ್ವೀಕೃತವಾಗಿರುವುದರಿಂದ ಕಂದಾಯ ಪರಿವೀಕ್ಷಕರು ಹಡಗಲಿ ರವರು ಎಂ.ಆರ್.ನಂ: ಹೆಚ್23/2014-15 ದಿನಾಂಕ 15-12-2015 ರಂದು ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ, ವಿಚಾರಣೆಗಾಗಿ ಈ ಕಾರ್ಯಾಲಯಕ್ಕೆ ಪ್ರಕರಣವನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ, ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಟಿಯಿಂದ ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯಾವಾದಿಗಳ ರವಗೂ ಕೇಳಿಕೊಳ್ಳಲು ಅವಕಾಶ ನೀಡಿ, ದಿನಾಂಕ 12-03-2015 ರಿಂದ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ವಾದಿಗಳು ಹಾಗೂ ಅವರ ಪರ ನ್ಯಾಯವಾದಿಗಳು ಮೇಳಿನ ದಾವಾ ಜಮೀನುನ್ನು ಹಾಲಿ ಪಟ್ಟದಾರರಾದ ಶ್ರೀಮತಿ.ಚಂದ್ರಕಲಾ ಗಂಡ ಕಮಲಾನಾಯ್ಕ ರವರ ಹೆಸರಿಗೆ ಪಹಣಿ ಪಟ್ಟಾ ಇದ್ದದರಿಂದ ಅವರಿಂದ ನೊಂದಣಿ ದಸ್ತಾವೇಜು ಸಂಖ್ಯೆ 247/201-15 ದಿನಾಂಕ:06-12-2014 ರ ಪ್ರಕಾರ ಖರೀದಿಗೆ ತೆಗೆದುಕೊಂಡಿರುತ್ತೆವೆ. ಈ ಜಮೀನು ಶ್ರೀಮತಿ.ಚಂದ್ರಕಲಾ ರವರು ಸ್ವತಹ ಸಂಪಾದಿಸಿದ ಆಸ್ತಿಯಾಗಿದ್ದು, ಸದರಿಯವರು ಯಾರಿಗೆ ಬೇಕಾದರೂ ಮಾರಾಟ ಮಾಡಬಹುದಾಗಿರುತ್ತದೆ.ಸ.ನಂ 99/ಬಿ ವಿಸೀರ್ಣ 7-20 ಎಕರೆ ಜಮೀನು ಶ್ರೀಮತಿ.ಚಂದ್ರಕಲಾ ರವರ ಹೆಸರಿಗೆ ಇದ್ದು, ಹರಪನಹಳ್ಳಿ ತಾಲೂಕಿನ ಮಾಡಲಗೇರಿ ಗ್ರಾಮದ ವಡ್ಡರ ಕೊಂಡಪ್ಪನ ಮಗ ಶ್ರೀ.ರಾಮಪ್ಪ ರವರಿಂದ ಖರೀದಿ ಮಾಡಿತ್ತಾಳೆ. ಅಂದಿನಿಂದಲೂ ಇವರೇ ಸಾಗು ಮಾಡುತ್ತಿದ್ದು ಈಗ ವಾದಿಯ ಹೆಸರಿಗೆ ಇದ್ದ ವಿಸ್ತೀರ್ಣ 7-20 ಎಕರೆ ಪೈಕಿ ವಿಸ್ತೀರ್ಣ 1-50 ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆ.ಆದ್ದರಿಂದ ಈ ಜಮೀನುನಲ್ಲಿ ಪ್ರತಿವಾದಿಗಳಾದ ಶ್ರೀಮತಿ.ಬಿ.ಉಮಾ ರವರು ಸಲ್ಲಿಸಿರುವ ತಕರಾರನ್ನು ತಳ್ಳಿಹಾಕಿ ಐಎಲಾಆರ್2013 ಕೆಎಆರ್3565 ಪ್ರಕರಣದ ಆದಾರದ ಪ್ರಕಾರ ಕ್ರಯನೊಂದಣಿ ಪ್ರತದರಂತೆ ಕ್ರಯದಾರರು ಹಾಗೂ ವಾದಿಗಳ ಹೆಸರಿಗೆ ಹಕ್ಕು ಬದಲವಣೆ ಮಾಡಲು ಕೋರಿ ತಮ್ಮ ಲಿಖಿತವಾದವನ್ನು ಮಂಡಿಸಿರುತ್ತಾರೆ.

ಪ್ರತಿವಾದಿ ಹಾಗೂ ಅವರ ಪರ ನ್ಯಾಯವಾದಿಗಳು ಮೇಲಿನ ದಾವಾ ಜಮೀನಿನ ವಿಸ್ತೀರ್ಣ 7-20 ಎಕರೆ ಇದ್ದು,ಪ್ರತಿವಾದಿಯಾ ಮತ್ತು ಅಕೆಯ ಗಂಡನ ಪಿರ್ತಾಜಿತ ಆಸ್ತಿಯಾಗಿದ್ದು ಇವರಿಗೆ ಈ ಜಮೀನುನಲ್ಲಿ ಸಂಪೂರ್ಣ ಹಕ್ಕು ಇರುತ್ತದೆ. ಹಾಗೂ ಈ ಜಮೀನಿನ ಬಗ್ಗೆ ಬಳ್ಳಾರಿಯ ಮಾನ್ಯ ಸಿವಿಲ್ ನ್ಯಾಯಾಲಯ ಹಿರಿಯ ಶ್ರೇಣಿ ರವರಲ್ಲಿ ವಿಚಾರಣೆಗೆ ಬಾಕಿ ಇದ್ದು, ಈ ಕ್ರಯನೊದಣಿ ಪತ್ರದ ಪ್ರಕಾರ ವಾದಿಗೆ ಹಕ್ಕು ಬದಲಾವಣೆ ಮಾಡಬಾರದೆಂದು ಕೋರಿ ತಮ್ಮ ಲಿಖಿತ ವಾದವನ್ನು ಮಂಡಿಸಿರುತ್ತಾರೆ.

ಈ ಪ್ರಕರಣದಲ್ಲಿ ವಾದಿ ಮತ್ತು ಪ್ರತಿವಾದಿಗಳ ಹಾಗೂ ಅವರ ಪರ ವಾದವನ್ನು ಆಲಿಸಲಾಯಿತು. ತಕರಾರುದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಈ ವಿವಾದಿತ ಜಮೀನು ಪ್ರತಿವಾದಿ ಮತ್ತು ಅವರ ಗಂಡನ ಪಿರ್ತಾಜಿತ ಆಸ್ತಿಯಾಗಿದೆ ಎಂದು ತಮ್ಮ ಲಿಖಿತ ವಾದದಲ್ಲಿ ತಿಳಿಸಿರುತ್ತಾರೆ.ಆದರೆ ಅದಕ್ಕೆ ಸಂಬಂಧಪಟ್ಟ ಪೂರಕ ದಾಖಲೆಗಳುನ್ನು ಹಾಜರು ಪಡಿಸಿರುವುದಿಲ್ಲದ ಕಾರಣ ಹಾಗೂ ಕ್ರಯನೊಂದಣಿ ಪತ್ರವನ್ನು ಆಸಿಂಧುಗಳಿಸಲು ಆಗಲಿ ಆಥವಾ ಅದನ್ನು ರದ್ದು ಪಡಿಸುವ

ಅಧಿಕಾರ ಈ ನ್ಯಾಯಾಲಯಕ್ಕೆ ಇಲ್ಲದ್ದರಿಂದ ತಕರಾರುದಾರರ ಮನವಿಯನ್ನು ತಿರಸ್ಥರಿಸಿ ಮಾನ್ಯ ಸಿವಿಲ್ ನ್ಯಾಲಯಾಲಯ ಹಿರಿಯ ಶ್ರೇಣಿ ಬಳ್ಳಾರಿ ರವರ ಓ.ಎಸ್.ನಂ.32/2015 ರಂತೆ ಮಾಡುವ ಆದೇಶಕೊಳಪಟ್ಟು ವಾದಿಯ ಹೆಸರಿಗೆ ಈ ಕೆಳಕಂಡ ಆದೇಶ

**ಆದೇಶ**

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆ, ಸಂದರ್ಭ, ಕಾರಣಗಳಿಂದಾಗಿ ಪ್ರತಿವಾದಿಗಳು ನೀಡಿದ ಆಕ್ಷೇಪಣೆಯನ್ನು ತಿರಸ್ಕರಿಸಿದೆ. ಕ್ರಯ ನೊಂದಣಿ ದಸ್ತಾವೇಜು ಸಂಖ್ಯೆ 247/21015–2016 ದಿನಾಂಕ 06–12–2014 ರ ಪ್ರಕಾರ ಹಾಗೂ ಮಾನ್ಯ ಸಿವಿಲ್ ನ್ಯಾಯಾಲಯ ಹಿರಿಯ ಶ್ರೇಣಿ ಬಳ್ಳಾರಿ ರವರ ಮಾಡುವ ಆದೇಶಕೊಳಪಟ್ಟು ವಾದಿಯಾದ ಶ್ರೀ.ಎಂ ಶೇಖರನಾಯ್ಕ ತಂದೆ ದಿವಂಗತ ರೇಖ್ಯಾನಾಯ್ಕ ರವರ ಹೆಸರಿಗೆ ತಮಲಾಪುರ ಗ್ರಾಮದ ಸ.ನಂ.99/ಬಿ ವಿಸ್ತೀರ್ಣ 1–50 ಎಕರೆ ಜಮೀನನ್ನು ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಮಾಡಿಸಿ, ದಿನಾಂಕ 26–05–2016ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

26/5/16

ತಹಶೀಲ್ದಾರರು
ಹಡಗಲಿ.

ಪ್ರತಿಗಳನ್ನು :

1) ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯವಾದಿಗಳಿಗೆ.
2) ಭೂಮಿ ಕೇಂದ್ರಕ್ಕೆ ಸೂಕ್ತ ಕ್ರಮಕ್ಕಾಗಿ.

Shekar naik